ಸಿ.ಸಿ ನಂ. 84/2021 ಪಿ.ಡಬ್ಲ್ಯೂ:1

ಸಾಕ್ಷಿಗೆ ಪ್ರಮಾಣ ವಚನವನ್ನು ದಿ:03-08-2026 ರಂದು ಬೊಧಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ನಾನು ಕ್ಲಾಸ್ 1 ಕಾಂಟ್ರಾಕ್ಟರ ಆಗಿರುತ್ತೇನೆ. 2014-15 ನೇ ಇಸ್ವಿಯಲ್ಲಿ ನೀವು ಎಷ್ಟು ಮೊತ್ತದ ಗುತ್ತಿಗೆ ಕೆಲಸವನ್ನು ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 29 ಲಕ್ಷದ ಗುತ್ತಿಗೆ ಕೆಲಸವನ್ನು ಮಾಡಿರುತ್ತೇನೆಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಗುತ್ತಿಗೆ ಕೆಲಸ ಮಾಡುವಾಗ 10% Schedule of Rate ನ್ನು ಸಂಬಂದಪಟ್ಟ ಇಲಾಖೆಯವರು ನಿಗದಿ ಮಾಡಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ 29 ಲಕ್ಷದ ಗುತ್ತಿಗೆ ಕೆಲಸಕ್ಕೆ ನನಗೆ 2,90,000/- ರೂ ಆದಾಯ ಬಂದಿರುತ್ತದೆ ಅಂದರೆ ಸರಿ.

ನಿಮ್ಮ ಗುತ್ತಿಗೆ ಕೆಲಸ ಹಣ ಹಾಗೂ ನಿಮ್ಮ ಲಾಬಾಂಶದ ಹಣ ನಿಮ್ಮ ಖಾತೆಗೆ ಬರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

2014-15 ನೇ ಇಸ್ವಿಯಲ್ಲಿ ಆರೋಪಿಗೆ ಹಣ ನೀಡಿದೆ ಎಂದು ಹೇಳಿರುವ ಅವಧಿಯಲ್ಲಿ ನಿಮ್ಮ ಖಾತೆಯಲ್ಲಿ ಎಷ್ಟು ಹಣ ಇತ್ತು ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಾನು ಆರೋಪಿಗೆ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ನಾನು ಆದಾಯ ಪಾವತಿದಾರನಿರುತ್ತೇನೆ. ದೂರಿನಲ್ಲಿ ಬರೆದಿರುವಂತೆ 7 ಲಕ್ಷ ರೂ ಹಣವನ್ನು ಆರೋಪಿಗೆ ನೀಡಿರುವ ಬಗ್ಗೆ ನಿಮ್ಮ ಆದಾಯ ತೆರಿಗೆಯಲ್ಲಿ ತೋರಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಖಾತೆಯಿಂದ ಹಣವನ್ನಾನಾದರೂ ತೆಗೆದು ಆರೋಪಿಗೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಶುಂಟಿ ಬೆಳೆಯಿಂದ ಹಣ ಬಂದಿದ್ದು ಅದನ್ನು ಅರೋಪಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಯಾವುದೇ ಶುಂಟಿ ಬೆಳೆಯನ್ನು ಬೆಳೆದಿರುವುದಿಲ್ಲ ಎಂದರೆ ಸರಿಯಲ್ಲ ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ದೂರಿನಲ್ಲಿ ನಿಮ್ಮ ಮತ್ತು ಆರೋಪಿಯ ನಡುವೆ ಒಂದು ಒಪ್ಪಂದ ಪತ್ರ ಆಗಿರುತ್ತದೆ ಎಂದು ತಿಳಿಸಿದ್ದು ಸದ್ರಿ ಒಪ್ಪಂದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದ್ರಿ ಒಪ್ಪಂದ ಪತ್ರವು ನನ್ನ ಹಾಗೂ ಆರೋಪಿತನ ಕಾಮನ್ ಫ್ರೆಂಡ್ ಆದ ಭಗವಾನ ಎಂಬುವವರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ.

ಮೇಲೆ ಹೇಳಿದ ಒಪ್ಪಂದ ಪತ್ರದಂತೆ ಆರು ತಿಂಗಳ ಒಳಗಾಗಿ ಆರೋಪಿಯು ಸಾಲದ ಹಣವನ್ನು ಮರುಪಾವತಿ ಮಾಡಬೇಕೆಂದು ದೂರಿನಲ್ಲಿ ಬರೆಸಿದ್ದು , ಸದ್ರಿ ಆರು ತಿಂಗಳು ಮುಗಿದ ನಂತರ 2020 ನೇ ಇಸ್ವಿಯವರೆಗೂ ನೀವೇನಾದರೂ ನಿಮ್ಮ ವಕೀಲರ ಮುಖಾಂತರ ಆರೋಪಿಗೆ ನೋಟೀಸನ್ನನೇದಾರೂ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಈ ಮೇಲಿನ ಅವಧಿಯಲ್ಲಿ ನೀವೇನಾದರೂ ವಕೀಲರನ್ನು ಭೇಟಿ ಮಾಡಿ ಎನು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ವಿಚಾರಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

2020 ನೇ ಇಸ್ವಿಯಲ್ಲಿ  ನಿಮ್ಮ ಹಾಗೂ ಆರೋಪಿಯ ನಡುವೆ ಮತ್ತೊಂದು ಒಪ್ಪಂದ ಪತ್ರವನ್ನು ಮಾಡಿಕೊಳ್ಳಲು ನಿಮಗೆ ತೊಂದರೆ ಇತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ ಸಾಕ್ಷಿಯು ಮುಂದುವರೆದು ಆರೋಪಿ ಚೆಕ್ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

ನಿಮ್ಮ ಹೇಳಿಕೆಯ ಪ್ರಕಾರ ಆರೋಪಿ ನಿಮಗೆ  2015 ನೇ ಇಸ್ವಿಯಲ್ಲಿ ಚೆಕ್ ನ್ನು ನೀಡಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಸದ್ರಿ ಚೆಕ್ ನ್ನು 2015 ನೇ ಇಸ್ವಿಯಿಂದ 2020 ನೇ ಇಸ್ವಿಯವರೆಗೂ ನಿಮ್ಮ ಖಾತೆಗೆ ಹಾಕಿಕೊಳ್ಳಲು ನಿಮಗೆ ತೊಂದರೆ ಇತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು, ನಾನು ಪ್ರತಿ ಬಾರಿ ಆರೋಪಿಗೆ ಪೋನ್ ಮಾಡಿದಾಗ ಆತನು ಹೇಳಿದಾಗ ಬ್ಯಾಂಕಿಗೆ ಹಾಜರುಪಡಿಸಲು  ಹಾಗೂ ದಿನಾಂಕ ನಮೂದು ಪಡಿಸಿ ಹಾಜರುಪಡಿಸಲು ಹೇಳುತ್ತಿದ್ದನ್ನು ಎಂದು ನುಡಿಯುತ್ತಾರೆ.

ನಿ.ಪಿ– 1 ಚೆಕ್ ನ್ನು ನನ್ನ ಮತ್ತು ಆರೋಪಿಯ ಕಾಮನ್ ಫ್ರೆಂಡ್ ಆದ ಭಗವಾನ್ ರವರು ಬರೆದಿರುತ್ತಾರೆ.

ದಿಃ 20-02-2015 ರಂದು ನಾನು ಆರೋಪಿಗೆ 3 ಲಕ್ಷ ರೂ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ದಿಃ 30-04-2015 ರಂದು ನಾನು ಆರೋಪಿಗೆ 4 ಲಕ್ಷ ರೂ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ.

ಮೇಲಿನ ಎರಡು ದಿನಾಂಕಗಳನ್ನು ನಾನು ದೂರಿನಲ್ಲಿ ಬರೆಸಿರುತ್ತೇನೆ. ಆ ರೀತಿ ನಾನು ಮೇಲಿನ ಎರಡು ದಿನಾಂಕಗಳನ್ನು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

ನೀವು ಬೆಂಗಳೂರಿನಲ್ಲಿದ್ದಾಗ ಆರೋಪಿ ನಿಮಗೆ ಹಣ, ವಗೈರೆ ಏನನ್ನಾದರೂ ನೀಡಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನನ್ನ ಖಾತೆಯು ಸಿದ್ದಾಪುರದಲ್ಲಿರುವ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾದಲ್ಲಿ ಇರುತ್ತದೆ. ನಿಮ್ಮ ಎಸ್ ಬಿ ಐ ಬ್ಯಾಂಕಿನ ಖಾತೆಯ ನಂ. 31134896559 ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 2014 ರ ಡಿಸೆಂಬರ ತಿಂಗಳಿನಲ್ಲಿ ಆರೋಪಿಯು ನಿಮ್ಮ ಖಾತೆಗೆ ಒಟ್ಟು 98,000/- ರೂ ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಮಾರ್ಚ 2015 ನೇ ಇಸ್ವಿಯಲ್ಲಿ ಆರೋಪಿಯು 1 ಲಕ್ಷದ ಚೆಕ್ ನ್ನು ನಿಮಗೆ ನೀಡಿದ್ದು , ಸದ್ರಿ ಚೆಕ್ ನ ಮುಖಾಂತರ 1 ಲಕ್ಷ ರೂ ನಿಮ್ಮ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ಬೆಂಗಳೂರಿನಲ್ಲಿ ಹೋಟೆಲ್ ಬಿಸಿನೆಸ್ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವೆ ಸ್ನೇಹ ಸಂಬಂದ ಚೆನ್ನಾಗಿತ್ತು ಎಂದರೆ ಸರಿ. ನಿಮ್ಮ ಮತ್ತು ಆರೋಪಿಯ ನಡುವೆ ಒಳ್ಳೆ ವಿಶ್ವಾಸ ಇತ್ತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಕಾಂಟ್ರಾಕ್ಟ ಕೆಲಸ ಮುಗಿದ ನಂತರ ಗುತ್ತಿಗೆ ದಾರರಿಗೆ ಹಣ ಬರುತ್ತದೆ ಎಂದರೆ ಸರಿ. ಗುತ್ತಿಗೆ ದಾರರು ಹಣವನ್ನು ಮೊದಲಿಗೆ ಹಾಕಿ ಗುತ್ತಿಗೆ ಕೆಲಸ ಮುಗಿದ ನಂತರ ಹಣ ಪಡೆಯಬೇಕಾಗುತ್ತದೆ ಎಂದರೆ ಸರಿ.

ನಿಮ್ಮ ಕಾಂಟ್ರಾಕ್ಟ ಕೆಲಸಕ್ಕೆ ಅನುಕೂಲವಾಗಲು ಆರೋಪಿಯು ನಿಮಗೆ ಮೂರು ಚೆಕ್ ಗಳನ್ನು ಸಣ್ಣ ಪುಟ್ಟ ಹಣವನ್ನು ತೆಗೆದುಕೊಳ್ಳಲು ನೀಡಿದ್ದರು ಎಂದರೆ ಸರಿಯಲ್ಲ.

ಸಿ.ಸಿ ನಂ. 84/2021 ಪಿ.ಡಬ್ಲ್ಯೂ:1

ಆರೋಪಿ ನನ್ನ ಬಳಿ ಯಾವುದೇ ಕಾರಣಕ್ಕೆ 7 ಲಕ್ಷ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಸಾ.ಓ.ಹೇ.ಸ.ಒ**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
**ಸಿದ್ದಾಪುರ**